‘ಗಲ್ಲಿಗೊಂದು ಶಾಲೆ ಇರುವುದು ಇಂಗ್ಲಿಷ್ ಮಾಧ್ಯಮದ ಶಾಲೆಗಳು, ಕನ್ನಡ ಶಾಲೆಗಳಲ್ಲ. ಅಲ್ಲೇ ಬರುವುದು ಮೂಲ ಸಮಸ್ಯೆ. ಈಗ ಎಲ್ಲರಿಗೂ ಬೇಕಿರುವುದು ಇಂಗ್ಲಿಷ್‌ನಲ್ಲಿ ಶಿಕ್ಷಣ. ತಂದೆ–ತಾಯಿಗೆ ತಮ್ಮ ಮಗು ಶೇಕ್ಸ್‌ಪಿಯರ್ ಆಗಬೇಕಂತಲ್ಲ. ಎಂಜಿನಿಯರ್ ಆಗ್ಲಿ, ಸಾಫ್ಟ್‌ವೇರ್ ಕೆಲಸ ಸಿಕ್ಕಲಿ, ಲಕ್ಷಗಳನ್ನ ಸಂಪಾದಿಸಲಿ, ಅಮೆರಿಕಕ್ಕೆ ಹೋಗಲಿ ಅಂತೆಲ್ಲ ಆಸೆ. ಅದಕ್ಕೆ ಅವರೂ, ಅವರ ಮಗು ಇಬ್ಬರೂ ಬಲಿಯಾಗುತ್ತಿದ್ದಾರೆ. ಹಾಗಾಗಿ ಇಂಗ್ಲಿಷ್ ಮಾಧ್ಯಮವಿರುವ ಶಾಲೆಗಳಿಗೆ ಜನ ಮುಗಿಬೀಳುತ್ತಾರೆ’ ಎಂದು ಜಲಜ ಹೇಳುತ್ತಾರೆ.

ಅಷ್ಟೆಯೇ ವಿಷಯ? ಇಲ್ಲ. ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನ ತೆರೆಯುವುದು, ನಡೆಸುವುದು ಎಷ್ಟೋ ಜನರಿಗೆ ಒಂದು ದೊಡ್ಡ ವ್ಯಾಪಾರ. ಅದೊಂದು ಚಿನ್ನದ ಮೊಟ್ಟೆಯಿಡುವ ಬಾತುಕೋಳಿಯಂತೆ. ದೊಡ್ಡ ಕಟ್ಟಡಕ್ಕೆ ರಂಗು ರಂಗಾದ ಬಣ್ಣಗಳನ್ನ ಬಳಿದು, ನಾಲ್ಕಾರು ಆಟಪಾಠ ಸಾಮಗ್ರಿಗಳನ್ನ ಇಟ್ಟು, ಒಂದು ಶಾಲಾ ಬಸ್ಸನ್ನ ತೋರಿಸಿ, ಠಾಕುಠೀಕಿನಿಂದ ಇಂಗ್ಲಿಷ್ ಮಾತನಾಡಿದರೆ ಪೋಷಕರು ಸಕ್ಕರೆಗೆ ಇರುವೆ ಮುತ್ತಿದಂತೆ ಬರುತ್ತಾರೆ. ದೈಹಿಕ ವ್ಯಾಯಾಮದ ಕ್ಲಾಸಿಗೆ ಒಂದು ಬಣ್ಣ, ಡಾನ್ಸ್ ಕ್ಲಾಸ್ ಇದ್ದರೆ ಮತ್ತೊಂದು ಬಣ್ಣ, ತನ್ನ ಹೌಸ್‌ಗೆ ಸಲ್ಲುವ ಇನ್ನೊಂದು ಬಣ್ಣ, ಅಲ್ಲದೆ ಮಾಮೂಲು ದಿನನಿತ್ಯದ ಎಂಬಂತೆ ನಾಲ್ಕಾರು ಬಣ್ಣಗಳ ಯೂನಿಫಾರ್ಮ್ ಡ್ರೆಸ್ ಕೋಡ್ ಇದ್ದರಂತೂ ಪೋಷಕರಿಗೆ ಓಹೋ, ಇದು ಇಂಟರ್‌ನ್ಯಾಷನಲ್ ಸ್ಕೂಲ್ ಎಂಬ ಭ್ರಾಂತಿ. ಆ ಶಾಲೆಗೇ ಇನ್ನಿಲ್ಲದಷ್ಟು ಡಿಮ್ಯಾಂಡ್. ಕಟ್ಟಡದ ಒಳಗೆ ಏನಿದೆ, ವ್ಯವಸ್ಥೆ ಹೇಗಿದೆ, ಜಾಹಿರಾತಿನಲ್ಲಿ ತೋರಿಸಿದ ಸೌಲಭ್ಯಗಳು ಇವೆಯೇ, ಎನ್ನುವುದನ್ನು ಹೆಚ್ಚಿನವರು ಗಮನಿಸುವುದಿಲ್ಲ. ಮಗು ಕ್ಷೇಮವಾಗಿ ಆರು ಗಂಟೆಗಳ ಕಾಲ ಶಾಲೆಯಲ್ಲಿದ್ದರೆ ಸಾಕು, ಇಂಗ್ಲಿಷ್ ಮಾತನಾಡಲು ಕಲಿತರೆ ಸಾಕು, ಎಲ್‌ಕೆಜಿಯಿಂದ ಹಿಡಿದು ಹತ್ತನೇ ಕ್ಲಾಸ್ ಅಥವಾ ಪ್ಲಸ್ ಟೂ ಹಂತದವರೆಗೆ ಬದಲಾಯಿಸದಂತೆ ಅದೇ ಶಾಲೆಯಲ್ಲಿದ್ದರೆ ಸಾಕು ಎನ್ನುವ ಪೋಷಕರು ಕಳಪೆ ಶಾಲೆಗಳ ಡಿಮ್ಯಾಂಡ್ ಏರುವುದಕ್ಕೆ ತಾವೇ ಪರೋಕ್ಷವಾಗಿ ಕಾರಣರಾಗುತ್ತಾರೆ. ಅಡ್ಮಿಷನ್ ಸಿಕ್ಕಿದರೆ ಸಾಕು ಎಂದು ಹಪಹಪಿಸುತ್ತಾರೆ. ತಾವು ಉದ್ಯೋಗಿಯಾಗಿರುವ ಕಂಪೆನಿ ಏನಾದರೂ ತಮ್ಮನ್ನು ವರ್ಗ ಮಾಡಿತು ಎಂದರೆ ಅವರು ಕುಟುಂಬವನ್ನ ಕದಲಿಸದೆ ತಾವೇ ಊರ ಬಿಟ್ಟು ನಡೆಯಬೇಕು. ಶಾಲೆಯಲ್ಲಿ ಓದುತ್ತಿರುವ ಮಕ್ಕಳನ್ನು ಕದಲಿಸಿ ಬೇರೆ ಊರಿನಲ್ಲಿ ಶಾಲೆಗೆ ಸೇರಿಸುವುದು ಒಂದು ದುಃಸ್ವಪ್ನ. ಯಾವ ಶಾಲೆಯೂ ಬಡಪೆಟ್ಟಿಗೆ ಅಡ್ಮಿಷನ್ ಕೊಡುವುದಿಲ್ಲ.

ಉಸಿರುಗಟ್ಟಿಸುವ ನಗರ ಜೀವನದಲ್ಲಿ ಎಲ್ಲರಿಗೂ ಏನೋ ತಪ್ಪಿಸಿಕೊಳ್ಳುವ ಧಾವಂತ. ಪೋಷಕರು ಮಕ್ಕಳನ್ನ ಶಾಲೆಯ ಗೇಟ್ ದಾಟಿಸಿದರೆ ಸಾಕು, ಮಿಕ್ಕಿದ್ದೆಲ್ಲಾ ಶಿಕ್ಷಕರು ನೋಡಿಕೊಳ್ಳುತ್ತಾರೆ ಅನ್ನೋ ಭಾವನೆ. ಶಿಕ್ಷಕರಿಗೆ ಮಕ್ಕಳಿಗೆ ಅಷ್ಟೋ ಇಷ್ಟೋ ಕಲಿಸಿ, ಹೋಂವರ್ಕ್ ಕೊಟ್ಟು, ಟೆಸ್ಟ್ ಪೇಪರ್‌ಗಳನ್ನ ಮಾರ್ಕ್ ಮಾಡಿ, ಮೀಟಿಂಗ್‌ಗಳಲ್ಲಿ ಹಾಜರಿದ್ದು ಹೋದರೆ ಸಾಕು ಅನ್ನೋ ಸುಸ್ತು.

ಚಿತ್ರ: ತಾಜುದ್ದೀನ್ ಆಜಾದ್



## ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ

ಕಳೆದ 15–20 ವರ್ಷಗಳಿಂದ ತಡೆಯಿಲ್ಲದೆ ನಡೆಯುತ್ತಿರುವ ಜಾಗತೀಕರಣದಿಂದ ಮತ್ತು ಐ.ಟಿ. ಸಂಸ್ಥೆಗಳ ಸ್ಫೋಟದಿಂದ ಶಿಕ್ಷಣ ಕ್ಷೇತ್ರದಲ್ಲಿ ಗುರುತರವಾದ ಬದಲಾವಣೆಗಳಾಗಿವೆ. ಮುಂಚೆ ಬರಿಯ ಇಂಗ್ಲಿಷ್ ಕಾನ್ವೆಂಟ್ ಎಂಬ ಬಿರುದನ್ನ ಧರಿಸಿದ್ದ ಇಂಗ್ಲಿಷ್ ಶಾಲೆಗಳು ಕ್ರಮೇಣ ಆಂಗ್ಲೋ–ಇಂಡಿಯನ್ ಶಾಲೆಗಳು, ಇಂಟರ್‌ನ್ಯಾಷನಲ್ ಶಾಲೆಗಳು ಎಂದೆಲ್ಲಾ ಬದಲಾಗಿವೆ. ಬಹುರಾಷ್ಟ್ರೀಯ ಕಂಪೆನಿಗಳ, ಐ. ಟಿ. ಸಂಸ್ಥೆಗಳ ವಹಿವಾಟುಗಳಿಗೆ ಹೊರದೇಶಗಳಿಂದ ಬಂದ ಜನರ ಮಕ್ಕಳಿಗೆ ತಕ್ಕಂತೆ, ಮುಖ್ಯವಾಗಿ ಇಂಗ್ಲಿಷ್ ಮಾತನಾಡುವ ಪಾಶ್ಚಿಮಾತ್ಯ ದೇಶಗಳ ಶಿಕ್ಷಣ ವ್ಯವಸ್ಥೆಯ ತದ್ರೂಪಿಯಂತೆ ಶಾಲೆಗಳು ರೂಪುಗೊಂಡಿವೆ. ಜೊತೆಗೆ ಹೊರದೇಶಗಳಲ್ಲಿ ಓದಿ, ಸ್ವಲ್ಪ ಕಾಲ ಇದ್ದು ಮರಳಿ ತವರಿಗೆ ವಾಪಸ್ ಆದವರ ನಿರೀಕ್ಷೆಗಳು, ಆಕಾಂಕ್ಷೆಗಳು ಹಲವಾರು. ತಮ್ಮ ಮಕ್ಕಳು ಶಾಲೆಯ ಪಠ್ಯಕ್ರಮದಲ್ಲಿ ಈಜು, ಸ್ವಯಂ ರಕ್ಷಣಾ ಕಲೆ, ವಿವಿಧ ನೃತ್ಯ ಪ್ರಕಾರಗಳನ್ನ ಕಲಿಯಬೇಕು, ಅದಕ್ಕೆ ಎಷ್ಟೇ ಫೀಸ್ ಆದರೂ ಪರವಾಗಿಲ್ಲ ಎನ್ನುವ ಶ್ರೀಮಂತರು ಕೆಲವರಿಗೆ ವರ, ಅನೇಕರಿಗೆ ಶಾಪವಾದರು. ಆ ಅನೇಕರ ಮಂದಿಯಲ್ಲಿ ಸೇರಿದವರು ನಂಬುವುದು ‘ಫೀಸ್ ಜಾಸ್ತಿ ಇದ್ದರೆ ಅದು ಒಳ್ಳೆ ಸ್ಕೂಲು. ಅಲ್ಲಿ ನಮ್ಮಕ್ಳು ಚೆನ್ನಾಗಿ ಕಲೀತಾರೆ. ಒಳ್ಳೆ ಮಾರ್ಕ್ಸ್ ತೊಗೊಂಡು ವಿದೇಶಕ್ಕೆ ಹೋಗ್ತಾರೆ’ ಎನ್ನುವ ಸೋಪಿನ ಗುಳ್ಳೆಯನ್ನ. ತಮ್ಮ ಮಕ್ಕಳು ಸಮರ್ಪಕವಾದ ರೀತಿಯಲ್ಲಿ, ಒಳ್ಳೆಯ ಗುಣಮಟ್ಟದಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರಾ ಅನ್ನುವುದು ಈಗ ಮೌಲ್ಯವಿರುವ ನಾಣ್ಯವಲ್ಲ.

ಕಳೆದ ಹತ್ತು ವರ್ಷಗಳಲ್ಲಿ ಅನೇಕ ಇಂಗ್ಲಿಷ್ ಶಾಲೆಗಳಲ್ಲಿ ಕ್ರಮೇಣವಾಗಿ ಮತ್ತೊಂದು ಸೇರ್ಪಡೆಯಾದ ಸೌಲಭ್ಯ ಶಾಲಾ–ಮೊದಲ ಮತ್ತು ಶಾಲಾ–ನಂತರದ ಮಕ್ಕಳ ಕೇರ್ ಸೆಂಟರ್‌ಗಳು. ಪಾಶ್ಚಿಮಾತ್ಯ ದೇಶಗಳಲ್ಲಿ ಇರುವ ಆ ವ್ಯವಸ್ಥೆ ಅಪ್ಪ– ಅಮ್ಮ ಇಬ್ಬರೂ ಕೆಲಸಕ್ಕೆ ಹೋಗುವ ಕುಟುಂಬಗಳಿಗೆ ವರದಾನವಾಯಿತು. ಬೆಳಗ್ಗೆ ಏಳೂವರೆಗೇ ಮನೆ ಬಿಟ್ಟು ಎಂಟು ಗಂಟೆಗೆ ಮಗುವನ್ನ ಬಿಫೋರ್–ಸ್ಕೂಲ್ ಕೇಂದ್ರಕ್ಕೆ ತಲುಪಿಸಿದರೆ